

ಟ್ರೋಲ್‌ಗಳು ಹೇಗೆಲ್ಲ ಪರಿಣಾಮ ಬೀರಿದ್ದವು ಎನ್ನುವುದನ್ನು ಅರ್ಥ ಮಾಡಿಸಲು ಹಾಗೆ ಹಾಕಬೇಕಾಯಿತು ಎಂದು ಸಮಜಾಯಿಷಿಯನ್ನೂ ಕೊಟ್ಟರು. ಅನಸೂಯಾ ಎರಡು ಮಕ್ಕಳ ತಾಯಿ. ಸಂಸಾರದ ನೊಗ ಹೊತ್ತುಕೊಂಡೇ ಸಾಂಸ್ಕೃತಿಕ ವಲಯದಲ್ಲಿಯೂ ಕೆಲಸ ಮಾಡುತ್ತಿರುವವರು. ಹೀಗೆ ಹಲವು ಒತ್ತಡಗಳನ್ನು ನಿರ್ವಹಿಸುವ ಅವರನ್ನೂ ಟ್ರೋಲ್‌ಗಳು ಕಂಗೆಡಿಸಿವೆ ಎಂದರೆ ಅವುಗಳ ವ್ಯತಿರಿಕ್ತ ಪರಿಣಾಮ ಎಂಥದೆನ್ನುವುದನ್ನು ಅಂದಾಜು ಮಾಡಬಹುದು.

## ಕಾಲದ ಕೂರಂಬುಗಳು

ಟ್ರೋಲ್‌ಗಳು ಈ ಕಾಲದ ಕೂರಂಬುಗಳು. ಜನಪ್ರಿಯತೆ ನಿಭಾಯಿಸಲು ಹೆಣಗಾಡಬೇಕಾದವರಿಗೆ ಅದು ಆ ಹೊರೆಯನ್ನು ಹೆಚ್ಚಾಗಿಸುವ ಸಂಗತಿಯಂತೂ ಹೌದು. ಟ್ರೋಲ್‌ಗಳು ತಮ್ಮ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಕರ್ನಾಟಕದ ಬ್ಯಾಟ್ಸ್‌ಮನ್ ಆಗಿ ಬೆಳೆದು, ಅಂತರರಾಷ್ಟ್ರೀಯ ಮಟ್ಟದಲ್ಲೂ ಸದ್ದು ಮಾಡಿದ ಕೆ.ಎಲ್. ರಾಹುಲ್ ಇತ್ತೀಚೆಗಷ್ಟೆ ಹೇಳಿದ್ದರು. ಈ ಹೇಳಿಕೆಗೆ ಅವರು ತಮ್ಮ ಅನುಭವವನ್ನೇ ಉದಾಹರಣೆಯಾಗಿ ಕೊಟ್ಟರು. ಯಾರೋ ಏನೋ ಟೈಪಿಸುವ ಮೂಲಕ ಮಾಡುವ ಟ್ರೋಲ್‌ಗಳಿಂದ ಉಂಟಾಗುವ ಮನೋಕ್ಷೋಭೆಯತ್ತ ಗಮನ ಸೆಳೆದ ಅವರ ಹೇಳಿಕೆಗೆ ಅರ್ಥವಿದೆ.

‘ನಿಂದಕರಿರಬೇಕು’ ಎನ್ನುವುದು ದಾಸವಾಣಿ. ಈ ಕಾಲಘಟ್ಟದಲ್ಲಿ ಅದೇ ‘ಟ್ರೋಲರ್‌ಗಳಿರಬೇಕು’ ಎಂದಾಗಿದೆ. ಆದರೆ, ನಿಂದಕರು ಬೇಕಾಗುವುದು ಆತ್ಮವಿಶ್ವಾಸ ಗಟ್ಟಿ ಮಾಡಿಕೊಳ್ಳುವಂತೆ ಪ್ರೇರೇಪಿಸಲು ಹಾಗೂ ಆತ್ಮವಿಮರ್ಶೆಗಾಗಿ. ಈಗ ಹಾಗಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಯಾರೋ ಅನಾಮಧೇಯರಾಗಿ ತಮಗೆ ತೋಚಿದ್ದನ್ನು ಟೈಪಿಸಿಬಿಡುವ ಮುಕ್ತ ಅವಕಾಶವಿದೆ. ಮುಖವೇ ಇಲ್ಲದವರ ಇಂತಹ ಟೀಕಾಪ್ರಹಾರ ಸೂಕ್ಷ್ಮ ಮನಸ್ಸಿನವರನ್ನು ಇರಿಯುತ್ತದೆ.

ಕ್ರಿಕೆಟಿಗ ಹನುಮ ವಿಹಾರಿ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಪಂದ್ಯವೊಂದರ ಇನಿಂಗ್ಸ್‌ನಲ್ಲಿ 100 ಎಸೆತಗಳಲ್ಲಿ 6 ರನ್ ಗಳಿಸಿದ್ದರು. ಟೆಸ್ಟ್ ಪಂದ್ಯವನ್ನು ಉಳಿಸಿಕೊಳ್ಳಲು ಅವರು ಆ ರೀತಿ ಪರಮ ಸಂಯಮದಿಂದ ಆಡಬೇಕಾದದ್ದು ಆ ಹೊತ್ತಿನ ಅನಿವಾರ್ಯವಾಗಿತ್ತು.